ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 78-82
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಜ.ನಾ.ತೇಜಶ್ರೀಯವರ 'ಮಾಗಿಕಾಲದ ಸಾಲುಗಳು': ಸ್ತ್ರೀಲೋಕದ ಎರಡು ಜಗತ್ತಿನ ಚಿತ್ರಗಳು

**ಸುಮಾ ವ. ಸಾವಂತ**
ಪ್ರಾಚಾರ್ಯರು, ಎ ಜಿ ಎಂ ಪದವಿ ಮಹಾವಿದ್ಯಾಲಯ, ವರೂರ, ಧಾರವಾಡ.

**Abstract:**
*ಜ.ನಾ.ತೇಜಶ್ರೀ ಅವರು ಲಯ, ತಿಳಿಗೊಳ, ಕತ್ತಲೆಯ ಬೆಳಗು, ಅವನರಿವಲ್ಲಿ, ಉಸುಬುಂಡೆ, ಮಾಗಿಕಾಲದ ಸಾಲುಗಳು (ಕವನ ಸಂಕಲನಗಳು) ಭಾರತ ರಾಷ್ಟ್ರೀಯ ಚಳುವಳಿ, ಚೀನಿ ತತ್ವಶಾಸ್ತ್ರದ ಕತೆ, ಕಡಲ ತಡಿಯ ಗುಡಾರ, ಬೆತ್ತಲೆ ಫಕೀರ, ಇರುವೆ ಮತ್ತು ಪಾರಿವಾಳ (ಅನುವಾದಿತ ಕೃತಿಗಳು) ನೀನಾಸಂಗಾಗಿ 'ವೋಲೆ ಸೋಯಿಂಕಾನ ಸಾವು ಮತ್ತು ರಾಜನ ಕುದುರೆ ಸವಾರ' ನಾಟಕದ ಅನುವಾದ. ಕವಿ ರವೀಂದ್ರ, ಬೆಟ್ಟದ ಮೇಲಿನ ಬೆಳಕು (ಸಂಪಾದಿತ) ಕೃತಿಗಳನ್ನು ಪ್ರಕಟಿಸಿದ್ದಾರೆ. ಇದರೊಂದಿಗೆ ಯು.ಆರ್.ಅನಂತಮೂರ್ತಿಯವರ 'ಸುರಗಿ' ಆತ್ಮಕತೆಯ ಸಂಯೋಜನೆ ಮತ್ತು ನಿರೂಪಣೆ ಮಾಡಿದ್ದಾರೆ. ಪ್ರಸ್ತುತ ಲೇಖನದಲ್ಲಿ ತೇಜಶ್ರೀಯವರ ಮಾಗಿಯ ಸಾಲುಗಳು ಕವನ ಸಂಕಲನ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಅನುವಾದ ಸಾಹಿತ್ಯ, ಕವನ ಸಂಕಲನ, ಜ.ನಾ.ತೇಜಶ್ರೀ, ಮಾಗಿಯ ಸಾಲುಗಳು, ಧ್ಯಾನಸ್ಥ*

## ಪೀಠಿಕೆ

ಹಲವಾರು ನಿರಾಳ ಕ್ಷಣಗಳು ಮಾಗಿ ಕಾಲದ ಸಾಲುಗಳು ಸಂಕಲನದ ಉದ್ದಕ್ಕೂ ಇವೆ. ಇವರ ಕವಿತೆಗೆ ಮೈತುಂಬ ಎಚ್ಚರಿದೆ. ಆ ಎಚ್ಚರವೆಂದರೆ ಧ್ಯಾನದ ಎಚ್ಚರ. ಆದುದರಿಂದ ತನ್ನೊಡಲು ಬಿಟ್ಟು ಬೇರಲ್ಲೂ ಸುಳಿಯುವುದಿಲ್ಲವಿದು. ಧ್ಯಾನಸ್ಥ ಕವಿತೆ ಎಂಬ ಮಾತುಗಳನ್ನು ಕೇಳಿದ್ದೇವೆ: ಯಾರೋ ಎಸೆದ ಕಲ್ಲಿಗೆ ತನ್ನಲ್ಲಿ ಉಂಟಾದ ತರಂಗಗಳನ್ನು ತಾನೇ ಅನುಭವಿಸುವ ಕೊಳದಂತೆ ಈ ಕವಿತೆ. ಹೇಗೆ ಎಸೆದರೂ, ಹೇಗೆ ಬಿದ್ದರೂ ಬಾಣದ ಮೊನೆಯಲ್ಲೇ ಸದಾ ಇರುವ ಅಗೋಚರ ಗುರಿಯಂತೆ ಈ ಕವಿತೆ. ತನ್ನನ್ನು ತಾನು ಅನುಭವಿಸುವುದಕ್ಕೆ ಇನ್ನೊಂದು ಬೇಕೇನೋ, ಆ ಇನ್ನೊಂದು ಕೂಡಾ ತಾನೇ ಆಗಿರುವೆನೇನೋ. ಹೀಗೆ ತೇಜಶ್ರೀ ಅವರ ಕವಿತೆಗಳು ಹೊಸ ಹುರುಪೊಂದನ್ನು ನೀಡುವಂತಿವೆ.

ಹಿರಿಯ ಕವಿ ಜಿ.ಎಸ್ ಶಿವರುದ್ರಪ್ಪನವರು ಆರ್. ನಿರ್ಮಲಾ ಅವರ 'ಉರಿವ ಒಲೆಗಳ ಮುಂದೆ' ಕವನ ಸಂಕಲನಕ್ಕೆ ಮುನ್ನುಡಿ ರೂಪದ ಒಂದು ಕವಿತೆ ಬರೆದಿದ್ದಾರೆ. ಆ ಕವಿತೆಯ ಸಾಲುಗಳು ಇಡೀ ಕನ್ನಡ ಮಹಿಳಾ ಕಾವ್ಯ ಎದುರಿಸಿದ ತಲ್ಲಣಗಳನ್ನು ಸವಾಲುಗಳನ್ನು ಬೆಳೆದು ನಿಂತ ಪರಿಯನ್ನು ಹೇಳುತ್ತದೆ ಎನಿಸುತ್ತದೆ.

***'ಉರಿವ ಒಲೆಗಳ ಮುಂದೆ ಕೂತ ಈ ಹೆಣ್ಣು***
***ಆಶಿಸುತ್ತಾಳೆ ಆ ದ್ರೌಪದಿಯ ಅಕ್ಷಯ***
***ಪಾತ್ರೆಗೆ ! ಎಂಥ ಸಾರ್ಥಕವಾದ ರೂಪಕ***
***ಈ ದೇಶದ ಮಹಿಳೆಯ ಚರಿತ್ರೆಗೆ.***
***ಉರಿಯುವದು ಒಲೆಯಲ್ಲ***
***ಅವಳೂ ಕೂಡ ಎಂಬ ವಾಸ್ತವಕ್ಕೆ."***

***Please cite this article as:*** ಸುಮಾ ವ. ಸಾವಂತ. (2024). ಜ.ನಾ.ತೇಜಶ್ರೀಯವರ 'ಮಾಗಿಕಾಲದ ಸಾಲುಗಳು': ಸ್ತ್ರೀಲೋಕದ ಎರಡು ಜಗತ್ತಿನ ಚಿತ್ರಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 78–82

ಇದು ಒಟ್ಟಾರೆಯಾಗಿ ಮಹಿಳೆ ಬದುಕನ್ನು ಎದುರಿಸಿದ ಚಿತ್ರ. ತಾನು ಉರಿದು ಮನೆತನದ ಒಲೆಯನ್ನು ಊದಿ ತನ್ನ ಆಶ್ರಯಿಸಿದ ಮಕ್ಕಳು, ಗಂಡ, ಮನೆಯವರು ಎಲ್ಲರಿಗೂ ಹೊಟ್ಟೆ ತುಂಬಿಸಿ ತಾನು ಮಾತ್ರ ಒಲೆಯ ಮುಂದಿನ ಅಕ್ಷಯಪಾತ್ರೆಯಾಗಿ ಒಲೆಯ ಮೇಲೆ ಕುದಿಯುತ್ತಲೇ ಬದುಕಿದ ಅವಳ ಚರಿತ್ರೆ ಎಷ್ಟು ಪುಟ ಬರೆದರೂ ಕೊನೆಯಾಗಲಾರದು, ಅಂತೆಯೇ ಕವಿಗಳು ಸ್ತ್ರೀ ಎಂದರೆ ಅಷ್ಟೇ ಸಾಕೆ? ಎಂದು ಪ್ರಶ್ನಿಸಿದ್ದರು.

ಜ. ನಾ. ತೇಜಶ್ರೀಯವರ 'ಮಾಗಿಕಾಲದ ಸಾಲುಗಳು' ಕವನ ಸಂಕಲನ ಓದುತ್ತ ನನಗೆ ಈ ಸಾಲುಗಳು ನೆನಪಾದವು. 2013 ರಲ್ಲಿ ಪ್ರಕಟವಾದ ಈ ಸಂಕಲನ ಒಟ್ಟಾರೆ ಮಹಿಳೆಯ ಅಂತರಂಗವನ್ನು ಬಿಚ್ಚಿಡುವ ಕಾವ್ಯವಾಗಿ ನನಗೆ ಕಂಡಿದೆ. ತನ್ನ ಭಾವನೆಗಳನ್ನು ವ್ಯಕ್ತ ಮಾಡುವ ಕವಿಯತ್ರಿ

***"ಈಗ ನಾನು ನೋಯುತ್ತೇನೆ, ನರಳುತ್ತೇನೆ***
***ಸೆಟೆಯುತ್ತೇನೆ***
***ಒಳಗು ಹೊರಕ್ಕೆ ಮುಗುಚುವಂತೆ***
***ಪುಟಿಯುತ್ತೇನೆ,***
***ಸಂದಿ ಮೂಲೆಗಳಲ್ಲಿ ಜಿನುಗುತ್ತೇನೆ***
***ಬಾವಿಯ ನಿತ್ಯ ತಂಪಲ್ಲಿ ಅಶ್ವತ್ಥದ ಕೊನರು"***
(ನೀನು ಹೇಳು)

ಮಹಿಳೆಯ ಒಟ್ಟಾರೆ ಈ ಕಾಲದ ಸಂಕಲನವನ್ನು ಕವಿತೆ ವಿವರಿಸಿದೆ ಎನ್ನಿಸಿದೆ. ಶತಮಾನಗಳ ಕಾಲ ಸುಮ್ಮನಿದ್ದ ಅವಳು ಈಗ ಸುಮ್ಮನಿರಲಾರಳು. ತನ್ನ ಪ್ರತಿಕ್ರಿಯೆಯನ್ನು ತುಸು ಥಾಳಾಗಿಯೇ ವ್ಯಕ್ತ ಮಾಡುತ್ತಿದ್ದಾಳೆ. ಹೌದು ಆಕೆಗೂ ಗೊತ್ತಿದೆ. ಅವಳಿಲ್ಲದೇ ಅವನ ಬದುಕೇ ಇಲ್ಲ. ಅದಕ್ಕೇ ಅವನಿಗೆ ನೀನು ಹೇಳು ಎನ್ನುತ್ತಲೇ

***"ನಾನು ಕರಗದೆ***
***ನೀನು ಕವಿತೆಯಾಗುವುದು***
***ಹೇಗೆ ಹೇಳು?"***
ಎಂಬ ಪ್ರಶ್ನೆ ಎತ್ತುತ್ತಾರೆ.

ಅವಳ ಜಗತ್ತೇ ಅವನು. ಅವನೊಡನೆ ಇದ್ದ ಸಮಯ ಅವಳಿಗೆ ತಾಯಿ ಕಂಡಾಗ ಬಾಲವೆತ್ತಿ ಚಿಮ್ಮಿ ನೆಗೆವ ಕರುವಿನಂತಾದಂತೆನಿಸುತ್ತದೆ. ಒಣಗಿ ನಿಂತ ಭೂಮಿಯಲ್ಲಿ ಮಳೆಯ ಹನಿ ಬೇಗೆಯನ್ನು ಉಂಡೆ ಕಟ್ಟುವಂತೆ, ಮಲ್ಲಿಗೆಯ ಎದೆಯಲ್ಲಿ ಸುಗಂಧ ಗೂಡು ನೆಯ್ದಂತೆ. ಒಟ್ಟಾರೆ ಅವನೊಂದಿಗಿನ ಸಖ್ಯವೆಂದರೆ

***"ಅಗೋ ಮಗುವ ನಗು, ಕೊಳಕರೆ***
***ಅನಂತ ಸುಖದ ನಿನ್ನೆದೆಗೊರಗಿದ ದು:ಖ***
***ನನ್ನ ಕೊರಳ ತೊಡರ ಬಿಡಿಸು ನೀನು***
***ಸರಳ ಸತ್ಯಗಳ ಎದೆತಾಕುವ ಶುಭ್ರತೆಯಲ್ಲಿ***
***ಬದುಕು ಅರ್ಥಪಡೆಯಲಿ***
***ಪರಸ್ಪರ –ನಿರಂತರ"***

ಕವಿತೆಯ ಕೊನೆಗೆ ತಾನು ಎದುರಿಸುತ್ತಿರುವ ತೊಡರುಗಳನ್ನು ನೆನಪಿಸುವ ಆಕೆ ಅ ತೊಡರುಗಳ ಬಿಡಿಸುವ ಶಕ್ತಿ ಇರುವುದು ಅವನೊಬ್ಬನಿಗೆ ಮಾತ್ರ ಎಂದು ಆಕೆಗೆ ಗೊತ್ತಿದೆ. ಅವನ ಮುಂದೆ ಮಗುವಾಗಿ ಎದೆಗೊರಗಿ ಅವನನ್ನು ಬೇಡುತ್ತಾಳೆ. ಹೀಗೆ ತೇಜಶ್ರೀಯವರ ಕವಿತೆಗಳ ಜಗತ್ತು ಒಂದು ನವಿರಾದ ಪ್ರೇಮದ ಜಗತ್ತು. ಅವರಿಬ್ಬರ ಸಂಬಂಧ ಜಗತ್ತಿನ ಯಾವ ಬಂಧಗಳಿಗೂ ಮಿಗಿಲು. ಅವನ ಕಣ್ಣು ನೆಟ್ಟು ಗರ್ಭಗುಡಿ ಅವನಿಗಾಗಿ ಪರಿಶುದ್ಧವಿರಬೇಕು ಎನ್ನಿಸಿ ತುಸುವಾಚ್ಯವಾಗಿಯೇ 'ಈ ದೇಹವನ್ನು ಸ್ವಚ್ಛವಿಟ್ಟುಕೊಳ್ಳಬೇಕು ಇನ್ನಾದರೂ 'ಎನ್ನುವ ಆಕೆ ಅದನ್ನು ಸ್ವಚ್ಛವಿಟ್ಟುಕೊಳ್ಳುವುದು ಅವನಿಗಾಗಿ. ಇದು ಶರಣರು 'ಮನೆಯೊಡೆಯನಿಗಾಗಿ ಮನೆ' ಸ್ವಚ್ಛವಿಟ್ಟುಕೊಳ್ಳುತ್ತೇವೆಂಬಂತಹ ಅರ್ಪಣಾ ಮನೋಭಾವ. ಆತ

***"ಮಾತಾಡದೇ ಮಾತು ಕಲಿಸಿದ***
***ಸಿಡುಕದೆ ಬದುಕು ಕಲಿಸಿದ***
***ನನ್ನ ಮೂಲಕ ಕಾಣುವ ನಿಚ್ಚಳ***
***ತೋರ್ಪಡಿಸುವ"***

***"ಕನ್ನಡಿಯಿದ್ದಂತೆ. ಅವನಿಗೆಲ್ಲವನು ಅರ್ಪಿಸಿ ಧನ್ಯಳಾದ ಆಕೆ ಈಗ ಸಂತೃಪ್ತೆ.***

***ನಾಚಿಕೆ ಕಳಚಿದ ಬೆತ್ತಲು***

***ಕುತೂಹಲವೇ ಸುತ್ತೆತ್ತಲು***

***ಸಾಮ್ರಾಣಿಯ ಘಮ್ಮನೆ ಗಮಲು***

***ಜೀಕುತ್ತಿದೆ ತೊಟ್ಟಿಲು***

***ನ ಮಲಗಿದೇನೆ ಸ್ವಚ್ಛ***

***ಅವನು ತೂಗುತ್ತಿದ್ದಾನೆ (ಸ್ವಚ್ಛ)"***

ಇಲ್ಲಿ ಸ್ವಚ್ಛತೆ ಬರೀ ದೇಹಕ್ಕೆ ಸಂಬಂದಿಸಿದ್ದು ಮಾತ್ರವಲ್ಲ, ಮನಸ್ಸಿನದೂ ಕೂಡ. ಅಕ್ಕನಂಥವರ ಅನುಭಾವಿ ಸಂಬಂಧವನ್ನು ನೆನಪಿಸುತ್ತದೆ ಕವಿತೆ. ಅದೊಂದು ಭಕ್ತ ಮತ್ತು ಶಿವನ ನಡುವಿನ ದಿವ್ಯಬಂಧವಾಗಿ ತೋರುತ್ತದೆ. ತನ್ನ ಮತ್ತು ತನ್ನ ಅಸ್ತಿತ್ವವೇ ಆದ ಅವನ ಬಂಧ ಈ ಲೋಕದ್ದಲ್ಲ ಎನ್ನುವಂತಿದೆ. ಅವನ ನೆನಪೇ ಅವಳಲ್ಲಿ ಜೀವ ಚೈತನ್ಯವನ್ನು ತುಂಬುವ ನೆನಪು

***"ಹೇಗೆ ಪುಟಿಯುತ್ತದೆ ನೋಡು ನನ್ನೊಳಗಿನ ಜೀವರಸ***

***ನಿನ್ನ ದನಿಗಾಗಿ, ಸ್ಪರ್ಶಕಾಗಿ, ನಡುವಿನ ಮೌನಕಾಗಿ***

***ಇಹದ ಎಲ್ಲ ಲಾಭಗಳಾಚೆ ನೀನು***

***ನನ್ನ ಮುನ್ನಡೆಸುವ ಶಕ್ತಿಗಾಗಿ"***

ಅದಕ್ಕೆ ನನಗನಿಸಿದ್ದು ಇದು ಒಂದು ರೀತಿಯಲ್ಲಿ ಅಲೌಕಿಕ ಎಂದು. ಕವಿತೆ ಹುಟ್ಟುವ ದಿವ್ಯಗಳಿಗೆ ಪ್ರಾಪ್ತವಾಗುವುದೆ ಅವನೊಡನಿರುವ ಅನನ್ಯ ಕ್ಷಣಗಳಲ್ಲಿ ಅದು ಖಂಡಿತವಾಗಿಯೂ ಅಲೌಕಿಕವೆ ಎನ್ನಿಸುವ ಸಂಶಯ 'ಕಾವ್ಯ ಮತ್ತು ದಿವ್ಯ'ದಂತಹ ಕವಿತೆಗಳಲ್ಲಿ ವ್ಯಕ್ತವಾಗಿದೆ. ಕವಿತೆ ಕೂಡ ಅವನನ್ನು ಬಿಟ್ಟು ಇಲ್ಲ. ಅದಕ್ಕೆ ಕವಿಯತ್ರಿ "ನನ್ನೊಳಗಿನ ನೀನು, ಅದರೊಳಗಿನ ಕಾವ್ಯದಿಂದ ಮಾತ್ರ ಈ ಸೃಷ್ಟಿಗೆ ಅರ್ಥ" ಎಂಬ ಸತ್ಯವನ್ನು ಅರಿತಿದ್ದಾಳೆ.

ಅವನೊಂದಿಗಿನ ಜಗತ್ತು ಈ ಲಾಭ ನಷ್ಟಗಳ ಹೊರಜಗತ್ತು ಅಲ್ಲ, ಆದರೆ ತಾನು ಬದುಕುವುದು ಲೌಕಿಕದ ಈ ಲಾಭ ನಷ್ಟಗಳ ಹೊರ ಜಗತ್ತಿನಲ್ಲಿ ಎಂಬ ಅರಿವು ಎಲ್ಲ ಕಾಲದ ಹೆಣ್ಣುಗಳಿಗೂ ಇದ್ದೇ ಇರುತ್ತದೆ. ಹೆಣ್ಣುಗಳಿಗೆ ಮಾತ್ರವಲ್ಲ ಲೌಕಿಕ ಅಲೌಕಿಕ (ಇನ್ನೊಂದು ಅರ್ಥದಲ್ಲಿ ಸಾಂಸಾರಿಕ ಹೊರಜಗತ್ತು, ಅಂತರಂಗದ ಭಾವ ಜಗತ್ತು) ಆ ಎರಡು ಲೋಕಗಳ ಅರಿವು ಅನುಭವಿಸಿದ ಪ್ರತಿಯೊಂದೂ ಜೀವ, ಅದು ಹೆಣ್ಣಿರಲಿ, ಗಂಡಿರಲಿ ಇದರ ಅರಿವನ್ನು ಕವಿತೆಯಲ್ಲಿ ವ್ಯಕ್ತ ಮಾಡದೇ ಇರದು. ಅದು ನಿಜಗುಣ ಶಿವಯೋಗಿಗಳು ಹೇಳುವಂತೆ "ಜಾಣನು ಲೌಕಿಕ ಪರಮಾರ್ಥವೆರಡನು ಸಾನುರಾಗದಲಿ ಸಾಕುವನು" ಎಂಬಂಥಹ ದ್ವಂದ್ವವಿದ್ದರೂ ದ್ವಂದ್ವವನ್ನು ಹೊರಹಾಕದ ಅವಿನಾಭಾವ. ಇದು ಆಕಾರ ಎಂಬ ಕವಿತೆಯಲ್ಲಿ ಸ್ಪಷ್ಟವಾಗಿದೆ.

***"ಇಲ್ಲಿ ಎಲ್ಲದಕ್ಕೂ ಆಕಾರವಿದೆ***

***ಎಲ್ಲವೂ ಕಾಲದೇಶಗಳ ಆಳು"***

ಹೌದು ನಾವು ಬದುಕುವುದೇ ಇಲ್ಲಿ. ಇದನ್ನು ಉಳಿಸಿಕೊಳ್ಳುವ ಅನಿವಾರ್ಯತೆಯೂ ನಮ್ಮ ನಮ್ಮ ಹೊರಜಗತ್ತಿಗೆ ಇದೆ. ಇಲ್ಲಿ ಅತಿಯನ್ನು ಬಯಸದೆ ಬದುಕನ್ನು ಬಂದಂತೆ ಸ್ವೀಕರಿಸಬೇಕು. ಇದು ವಾಸ್ತವದ ಜಗತ್ತು.

***"ಉಳಿಸಿಕೊಳ್ಳಲು ಪ್ರತಿಯೊಂದನ್ನೂ***

***ಅದು ಇರುವುದರ ಹಾಗೆಯೇ***

***ಉಣ್ಣಬೇಕು, ಮತ್ತೆ ಹುಟ್ಟಿಸಬೇಕು***

***ಹುಟ್ಟಿದ್ದೆಲ್ಲ ಕಳೆಯಲೇಬೆಕು***

***ಲಯಕ್ಕೊಂದು ಲಯವಿದೆಯಲ್ಲ"***

ಇದು ಕಾಲ ಬಂದಂತೆ ಅಷ್ಟಷ್ಟೇ ಕರಗುವ, ಲಯವಾಗುವ ಜಗತ್ತು. ಇಲ್ಲಿ ತನ್ನದು ಎಂಬುದನ್ನು ಉಳಿಸಿಕೊಳ್ಳಲು ಅದು ಇರುವಂತೆಯೇ ಉಳಿಸಿಕೊಳ್ಳಬೆಕಗುತ್ತದೆ. ಆದರೆ ಇನ್ನೊಂದು ಜಗತ್ತು ಇದೆಯಲ್ಲ ಅದು ಭಾವಜಗತ್ತು ಈ ಎರಡೂ ಜಗತ್ತುಗಳಲ್ಲಿ ಜೀವಿಸುವ ಅಗತ್ಯ ಭಾವನೆಗಳಿರುವ ಪ್ರತಿಯೊಬ್ಬನಿಗೂ ಇದೆ. ಹಾಗೆ ಬದುಕುತ್ತಾನೆ ಕೂಡಾ. ಅದಕ್ಕೆ ಆ ಇನ್ನೊಂದು ಜಗತ್ತಿನ ಬಗ್ಗೆ ಕವಿತೆ

***"ನನ್ನ ಇನ್ನೊಂದು ಪ್ರಪಂಚದಲ್ಲಿ***

***ಯಾವುದಕ್ಕೂ ಆಕಾರವಿಲ್ಲ***

***ಮಿತಿಮಿತಿಗೆ ಬದ್ಧವಲ್ಲ***

***ಕ್ರಿಯೆಗೆ ಪ್ರತಿಕ್ರಿಯೆಯ ಹಂಗಿಲ್ಲ***
***ಇಲ್ಲಿ ನಾನು ಮತ್ತು ನೀನು***
***ಸಾಯುವುದಿಲ್ಲ"***

ಕೊನೆಯ ಸಾಲಲ್ಲಿ ಪ್ರೇಮದ ಚಿರಂತತೆಯನ್ನು, ಭಾವಜಗತ್ತಿನ ನಿತ್ಯತೆಯನ್ನು ಕವಿತೆ ಬಣ್ಣಿಸುತ್ತದೆ, ಅಲ್ಲಿ ನಾನು ಮತ್ತು ನೀನು, ನಮಗೆ ಸಾವಿಲ್ಲ ಎನ್ನುವ ಸಾಲುಗಳಂತೂ ಆ ಅಗಮ್ಯದ ಅನುಭವ ಮಾಡಿಸಲು ಪ್ರಯತ್ನಿಸುತ್ತವೆ. ಅದು ಯಾವುದೇ ಪ್ರಶ್ನೆ ನಿರೀಕ್ಷೆಗಳಿಲ್ಲದ ಜಗತ್ತೂ ಹೌದು. ಅದು ಗಂಧದ ಜಗತ್ತು ತೇಯ್ದಷ್ಟೂ ಸುಗಂಧ ಹೊರಡುತ್ತದೆ. ಪ್ರೇಮ ಭಕ್ತಿಯ ಅನನ್ಯ ಭಾವದಂತೆ. ಅಲ್ಲಿ ವಯಕ್ತಿಕತೆ ಗಂಧದಂತೆ ತೇಯಲ್ಪಟ್ಟು ನಿಜದ ಅರಿವಿಗಾಗಿ ಅರಿಯಬೇಕು. 'ಗಂಧ'ದಂತಹ ಕವಿತೆಗಳು ಬರೀ ಲೌಕಿಕಕ್ಕೆ ನಿಲ್ಲದೆ ಇನ್ನೇನನ್ನೊ ಸಂಕೇತಿಸುವಂತಿವೆ.

ಪ್ರತಿ ಜೀವವೂ ತನ್ನ ಸಿಗದ ಪ್ರೀತಿಗಾಗಿ ಹಪಹಪಿಸುವುದು ಕಾವ್ಯದ ಮಹತ್ವದ ಭಾಗವೆ. ಅದು ಹೆಣ್ಣು ಜೀವಕ್ಕಂತೂ ಬಹಳ ಮಹತ್ವದ್ದು. ಅದು ಅಂದಿನ ಅಕ್ಕನಿಂದ ಇಂದಿನ ಕವಯಿತ್ರಿಯವರೆಗೂ ಆ ತಹತಹ ಇದ್ದದ್ದೇ. ತೇಜಶ್ರೀಯವರ ಕವಿತೆಯಲ್ಲಿ ಪ್ರೀತಿ ಮೋಕ್ಷವೂ ಹಾಗೆ ಕಣಿಸುವದು ಬಹಳ ಮುಖ್ಯವೆನಿಸುತ್ತದೆ.

***"ಪ್ರೀತಿಯೊಂದೇ ಧರ್ಮ***
***ನೀನು ಮೋಕ್ಷ***
***ಕಾಮಕ್ಕೆ ಅರ್ಥ ಹುಡುಕಬೇಕೇಕೆ?***
***ಅರ್ಥವೆಂಬುದು ಶಬ್ದದ ಗೊತ್ತು ಪಾಡು."***

ಎನ್ನುತ್ತಾರೆ.

ಇಲ್ಲಿ ಪ್ರತಿಕವಿತೆಯೂ ನಿನ್ನ ಬಿಟ್ಟು ಅಸ್ತಿತ್ವವೇ ಇಲ್ಲ. ಎಲ್ಲ ಕವಿತೆಗಳಲ್ಲಿ ಅವನೇ ಒಂದಲ್ಲ ಒಂದು ರೀತಿ ಪ್ರತ್ಯಕ್ಷವಾಗಿದ್ದಾನೆ. ಒಂದು ರೀತಿಯಲ್ಲಿ ಇಡೀ ಸಂಕಲನವೇ ಅವನ ಹಂಬಲಕ್ಕೆ ತುಡಿದಿದೆ.

***ನೀನು ನನ್ನನ್ನು ನಿನ್ನ ಹೊರಗೆ ಸೃಷ್ಟಿಸುತ್ತೀಯ***
***ನಾನು ನನ್ನ ಒಳಗೆ ನಿನ್ನನ್ನು***

ಎನ್ನುವಲ್ಲಿ ಅದು ಸ್ಪಷ್ಟವಾಗಿದೆ. ತನ್ನ ಪ್ರೇಮದ ಆಧಾರವಂತೂ ಅವನೇ. ಆತನಿಗೆ ಆಡಿಸುವಾತ ಬೇಸರಿಸಬ್ಯಾಡೋ' ಎಂಬ ಅಹವಾಲು ಸಲ್ಲಿಸುತ್ತಾಳೆ. (ಕಿಡಿ) ಅವಳಿಗೆ ಸ್ಪಷ್ಟವಿದೆ ಪ್ರೇಮ ಇಡಿ, ಬಿಡಿಗಳ ಅಟವಲ್ಲ,

***"ಪ್ರೇಮ–ಲಘುಗುರುಗಳ ಆಟ***
***ಇಡಿಯಲ್ಲ ಬಿಡಿಯ ಪಾಠ***
***ಆದಿ ಅನಾದಿಗಳ ನಡುವೆ***
***ವ್ಯಕ್ತವಾದ ಬೆಳಕ ಕಿಡಿ ನೀನು***
***ಆರಗೊಡುವುದಿಲ್ಲ.***

***ಒಳಗು–ಓಲಗಿನ ಮಾತು ಇದು***
***ಬರಿಗಣ್ಣಿಗೆ ತೋರುವುದಿಲ್ಲ***
***ಆಡಿಸುವಾತ ನೀನಾಗಿರುವಾಗ***
***ಸಾವಿನ ಭಯ ಇಲ್ಲ ನಿನಗೆ!"***

ಎಂಥ ಅದ್ಭುತ ಪ್ರೀತಿ ಇದು? ಆತ ಬಂದಾಗಿನಿಂದ ಅವಳ ಬದುಕು "ಆಗಿಂದ ನನ್ನ ಬದುಕು ರಕ್ಷೆಯ ಕವಚದೊಳಗೆ ಪ್ರೀತಿಯ ಧ್ಯಾನಕ್ಕೆ ಕುಳಿತ ಗೋದಿಯ ಕಾಳು" (ವ್ಯಕ್ತಮಧ್ಯ) ಇದು ಅವಳ ನಿಷ್ಠೆ ಮತ್ತು ನಂಬಿಕೆ. ಆದರೆ, ಲೋಕ ಅದನ್ನು ಒಪ್ಪುವುದೋ ಬಿಡುವುದೋ ಹೆದರಿಕೆ ಅವಳಿಗೆ. ಅದಕ್ಕೆ ಈ ಪ್ರೀತಿ 'ಒಳಗೆ ಮುಲುಕುವ ಜೀವ' ಎನ್ನುವ ಆಕೆ "ನನ್ನ ಮೂಲಕ ಹುಟ್ಟಿದ ಈ ಕವಿತೆಗೆ ಯಾರ ಹೆಸರಿಡುವುದು ಹೇಳು" (ಹೆಸರು)ಎಂಬ ಸಂದಿಗ್ಧದಲ್ಲಿದ್ದಾಳೆ. ಆದರೆ ಪ್ರೀತಿ ಎರಡಾಗಲು ಸಾಧ್ಯವಿಲ್ಲ. ಜಗತ್ತಿಗೆ ಸೂರ್ಯ ಹೇಗೆ ಒಬ್ಬನೋ ಹಾಗೆಯೇ ಪ್ರೀತಿಯೂ ಒಂದೇ (ಸೂರ್ಯ) ಹೀಗೆ ಎರಡರ ಮಧ್ಯೆ ಬೇಯುವ ಈ ಪ್ರೀತಿ ಬಹುಶಃ ಬೇಯುತ್ತಲೇ ಇರಬೇಕಾದದ್ದು ಅನಿವಾರ್ಯ ಎಂದು ತೋರುತ್ತದೆ. ಇದಕ್ಕೊಂದು ತಾರ್ಕಿಕ ಅಂತ್ಯ ಯಾವ ಪ್ರೀತಿಯಲ್ಲೂ ದೊರೆತಿಲ್ಲ. ಲೋಕ ಅದನ್ನು ಒಪ್ಪದು, ಮನಸ್ಸು ಅದರಿಂದ ಹೊರಬರದು.

ಪ್ರೀತಿ ಮತ್ತು ಕವಿತೆ ಎಂದೂ ಬೇರೆ ಬೇರೆ ಎಂದು ತಿಳಿದವರಲ್ಲ ಕವಯಿತ್ರಿ.

***"ಕಂತುವ ಸೂರ್ಯನ ಬೆಳಕಲ್ಲಿ***
***ನಿನ್ನ ನೆನಪಿದೆಯಾದರೆ***
***ಅಲ್ಲೇ ಕವಿತೆಯೂ ಇರಬೇಕು"***
(ಪಡುವಲ ಕವಿತೆ)

ತಾನು ಹೇಳದೆಯೇ ಅವನಿಗದು ತಿಳಿಯಬೇಕು (ಜಲಕಣ್ಣು) ಇದವಳ ಆಸೆ. ಪ್ರೇಮ ಬೆಳೆದು ಅನುಭಾವವಾಗುವ ಪರಿಗೆ ನಾವು ಬೆರಗಾಗಗಬೇಕು. ಬರುಬರುತ್ತ ದೇಹ ಭಾವ ಅಳಿದು ಅಲ್ಲಿ ಹೊಸದೊಂದು ಬಂಧ ಸೃಷ್ಟಿಯಾಗುತ್ತದೆ. ಇದೇ ಪ್ರೇಮದ ಅಂತಿಮ ಗುರಿ ಅಂಥಹದ್ದನ್ನು ಸಂಧಿಸಿದುದಕ್ಕಾಗಿಯೇ ಈ ಕವಿತೆಗಳು ನಮಗೆ ಶ್ರೇಷ್ಠ ಎನ್ನಿಸುತ್ತವೆ.

***"ಆಡುವ ಮಾತಿಗೆ***
***ತಿಳಿದಷ್ಟೇ ಅರ್ಥ, ಅಲ್ಲ.***
***ಚೌಕಟ್ಟು ಮುರಿಯಬೆಕು***
***ಬೇಡಿ ಕಳಚಲು***
***ಕೊಳೆಯವುದು ಕಾಲ ಧರ್ಮ***
***ಚಲನೆಯ ಚಿತ್ರಕ್ಕೆ ಅರಿವಿನ ನಿಲುಗಡೆ***
***ನನ್ನ ನಿನ್ನ ದೇಹಕ್ಕೆ ಕಾಮ***
***ಒಂದೇ ಅರ್ಥವಲ್ಲ, ಭಾರದಿಂದ***
***ಬಿಡುಗಡೆಯೆಂದರೆ ಶಬ್ದಕ್ಕೆ ಹೊಸಜೀವ"***
(ಅರ್ಥ)

ಇಡೀ ಕವಿತೆ ಹೊಸವಿನ್ಯಾಸದಲ್ಲಿ ಅವರ ಬಂಧವನ್ನು ವ್ಯಾಖ್ಯಾನಿಕರಿಸುವ ಪ್ರಯತ್ನ ಮಾಡುತ್ತದೆ. ಅದು ಕೇವಲ ಕಾಮದ ಸಂಬಂಧವಲ್ಲ ಬೇರೆ–ಬೇರೆ ಅರ್ಥಗಳಿವೆ ಎನ್ನುವಲ್ಲಿಗೆ ಅದು ಅನುಭಾವದ ಎತ್ತರಕ್ಕೂ ಏರುತ್ತದೆ. ಇದನ್ನೇ ಸಿದ್ಧಿ ಎಂಬ ಕವಿತೆ

***"ನಿನ್ನ ಧ್ಯಾನದಲ್ಲಿ***
***ನಾನು ದೇಹವಲ್ಲ, ಬುದ್ಧಿಯಲ್ಲ***
***ಅಹಂಕಾರವಲ್ಲ, ಮನಸ್ಸಲ್ಲ, ಕಾಮನೆಯಲ್ಲ***
***ಯಾವುದೂ ಏನೂ ಅಲ್ಲದ***
***ಪ್ರೀತಿ, ಆನಂದ ಮತ್ತು ಬೆಳಕು"***

ಎಂದು ಧ್ಯಾನಿಸುವ ಕವಯಿತ್ರಿ ಅವನ ಪ್ರೀತಿ ಅವಳ ಉಸಿರಾಗಬೇಕಾದರೆ ತಾನು ಕವಿತೆ ಬರೆಯಬೇಕು ಎಂದು ಸ್ಪಷ್ಟವಾಗಿ ನಂಬಿದ್ದಾಳೆ. ಏಕೆಂದರೆ ಈಗ ಆತ ಕವಿತೆಯಲ್ಲಿ ಮಾತ್ರ ಸಾಧ್ಯವಾಗುವ ರೂಪಿಯಾಗಿದ್ದಾನೆ. ಪ್ರೀತಿಯೆಂದರೆ ತಾನು ಒಲಿದ ಜೀವಕ್ಕೆ ಸದಾ ಒಳಿತು ಬಯಸುವ ಹೃದಯ ತಾನೆ? 'ಸಾವಿಗೆ' ಎನ್ನುವ ಕವಿತೆ ತನ್ನ ಒಲವನ್ನು ಸದಾ ಎಚ್ಚರಿದ್ದು ಕಾಯುತ್ತೇನೆ ಎನ್ನುತ್ತದೆ.

***"ಸಾವು ನಿನ್ನ ಬಳಿ ಸುಳಿಯದಂತೆ***
***ಕಾಯಬೇಕು ನಾನು***
***ನಿನ್ನ ಧ್ಯಾನಿಸಿ ಬರೆದ ಕವಿತೆಯನ್ನು ಆ ಸಾವಿಗೆ***
***ಓದಿ ಹೇಳುತ್ತೇನೆ***
***ರಾತ್ರಿಯಿಡೀ ಎಚ್ಚರಿದ್ದು***
***ನೀನು ನಿರಾಳ ಮಲಗು"***

ಜ.ನಾ. ತೇಜಶ್ರೀಯವರ ಒಟ್ಟಾರೆ ಕವಿತೆಗಳ ತುಂಬ ತುಂಬಿರುವುದು ಪ್ರೀತಿ, ಬರೀ ಅವನ ಪ್ರೀತಿ. ಅದು ಬೇರೆ ಬೇರೆ ರೀತಿಯಲ್ಲಿ ಮೈತಳೆದಿದೆ ಅಷ್ಟೇ. ಇದು ನಿಜದಲ್ಲಿ ಸಾಧ್ಯವಾಗದಂತದ್ದೂ ಇರಬಹುದು. ಅದು ಸರಿಯೇ? ಸಮಾಜ ಒಪ್ಪಿತವೇ? ಅಥವಾ ಬರೀ ಅವರಿಗಷ್ಟೇ ಸತ್ಯವಾದ ಸಂಗತಿಯೇ ಕವಿತೆಯಲ್ಲಿ ಇದೆಲ್ಲ ಏನೂ ಅರ್ಥವಾಗುವುದಿಲ್ಲ. ಅಲ್ಲಿ ತನ್ನ ಪ್ರೀತಿಗಾಗಿ ಹಂಬಲಿಸುವ ಒಂದು ಜೀವವಿದೆ ಅಷ್ಟೇ. ಅದು ಸಾರ್ಥಕವಾದಾಗ ಸಂತಸ ಪಡುವ, ಅದು ಸಿಗದೇ ಇದ್ದಾಗ ಅದಕ್ಕಾಗಿ ಹಂಬಲಿಸುವ ಭಾವಗಳು ಚಿಕ್ಕ ಚಿಕ್ಕ ಕವಿತೆಗಳಾಗಿವೆ. ಪ್ರತಿ ಕವಿತೆಯ ತುಡಿತವೂ ಅವನತ್ತಲೇ ತುಡಿಯುತ್ತದೆ. ಅವನನ್ನೇ ಹುಡುಕುತ್ತದೆ. ಈ ಭಾವಕ್ಕೆ ಹೆಸರೇನು ಎನ್ನುತ್ತಲೇ ವಿಶಿಷ್ಟ ಬಂಧವೊಂದನ್ನು ಚಿತ್ರಿಸುವ ಪ್ರಯತ್ನವನ್ನು ಮಾಡುತ್ತಾರೆ.

**ಆಕರ ಗ್ರಂಥ**


- ತೇಜಶ್ರೀ ಜ.ನಾ. (2013). ಮಾಗಿಕಾಲದ ಸಾಲುಗಳು. ಅಕ್ಷರ ಪ್ರಕಾಶನ.